ದಿನಾಂಕಃ 22-12-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u>- ಶ್ರೀ.ಎಸ್.ಜಿ.ಕೆ. ಆರೋಪಿ ಪರ ವಕೀಲರಿಂದ

ಈ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ನನಗೆ ಎಲ್ಲಾ ಮಾಹಿತಿ ಇದೆ. ಆರೋಪಿಗೆ ನಾನು ವಕೀಲರ ಮೂಲಕ ಕೊಟ್ಟ ನೋಟೀಸು ಯಾವಾಗ ಜಾರಿಯಾಯಿತು ಎಂದರೆ ಸಾಕ್ಷಿಯು ದಿಃ 04-10-2010 ರಂದು ಎನ್ನುತ್ತಾರೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ಯಾವ ದಾಖಲೆ ಎಂದರೆ ಸಾಕ್ಷಿ ಉತ್ತರಿಸುವುದಿಲ್ಲ. ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ Not Known Return to Sender ಎಂದು ಷರ ಬರೆದಿದೆ ಎಂದರೆ ಸರಿ. ನಂತರದಲ್ಲಿ ಪುನಃ ನೋಟೀಸು ಕಳುಹಿಸಿದ್ದೇನೆಯೇ ಎಂದರೆ ಹೌದು. ಯಾವ ದಿನಾಂಕದಂದು ನೋಟೀಸು ಕಳುಹಿಸಿದ್ದೀರಿ ಎಂದರೆ ದಿಃ 04-10-2010 ರಂದು ಎನ್ನುತ್ತಾರೆ. ಆ ರೀತಿ ಪುನಃ ಕಳುಹಿಸಿದ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಇಲ್ಲ. ನನ್ನ ದೂರಿನಲ್ಲಿ ಆರೋಪಿ ಮತ್ತು ಕಂಪನಿಯ ನಡುವೆ ಕರಾರು ಆಗಿತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಕರಾರು ಆಗುವ ಸಮಯದಲ್ಲಿ ಯಾರ್ಯಾರು ಇದ್ದರು ಎಂದರೇ ಕೇನ್ ಡೈರೆಕ್ಟರ ಮತ್ತು ನಾನು ಇದ್ದೆವು. ಅವರ ಹೊರತಾಗಿ ಬೇರೆ ಯಾರೂ ಇರಲಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ನಕಲುಗಳನ್ನು ಆರೋಪಿಗೆ ಆರೋಪಿ ಪರ ವಕೀಲರ ಮೂಲಕ ನ್ಯಾಯಾಲಯದಲ್ಲಿ ಕೊಟಿದ್ದೇವೆ ಎಂದರೆ ಸರಿ. ಅದರಲ್ಲಿ ಕರಾರಿನ ನಕಲು ಇದೆ ಎಂದರೆ ಸರಿ. ಸದರಿ ಕರಾರು ನಿಪಿ-11 ಎಂದು ಗುರುತಿಸಲ್ಪಟ್ಟಿದೆ ಎಂದರೆ ಸರಿ. ಸಾಕ್ಷಿಗೆ ಆ ರೀತಿ ಆರೋಪಿಗೆ ಕೊಟ್ಟ ಕರಾರಿನ ನಕಲನ್ನು ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ ಅದನ್ನು ನಿಡಿ-10 ಎಂದು ಗುರುತಿಸಲಾಯಿತು. ನಿಪಿ-11 ರ 2 ನೇ ಪುಟದಲ್ಲಿ ನಮಗೆ ಬೇಕಾದಂತೆ ಬರೆದು ಬರ್ತಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-11 ಕ್ಕೆ ಖೊಟ್ಟಿ ರೀತಿಯಾಗಿ ಆರೋಪಿ ರೀತಿಯದ್ದೆ ಸಹಿ ಬರೆಯಲ್ಪಟ್ಟಿದೆ ಎಂದರೆ ಸರಿಯಲ್ಲ. ಕಬ್ಬನ್ನು ಕಟಾವು ಮಾಡಿ ಫ್ಯಾಕ್ಟರಿಗೆ ಸಾಗಿಸುವ ಬಗ್ಗೆ ಬೆಳೆಗಾರರೊಂದಿಗೆ ಕರಾರು ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಆ ಸಂಬಂಧ ಕಬ್ಬು ಸಾಗಾಣೆ ಮಾಡುವ ವಾಹನಗಳ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಕಬ್ಬನ್ನು ಕಟಾವು ಮಾಡುವವರೊಂದಿಗೂ ನಾವು ದಾಖಲಾತಿ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಕಟಾವು ಮಾಡುವವರು ಕೆಲವರು ನಮ್ಮಿಂದ ಮುಂಗಡ ಹಣ ಪಡೆಯುತ್ತಾರೆ ಎಂದರೆ ಸರಿ. ನಿಪಿ-1 Post-Dated (Cheque) ಚೆಕ್ಕೆ ಎಂದರೆ ಸಾಕ್ಷಿಯು ಆರೋಪಿಯೇ ಬರೆದುಕೊಟ್ಟಿದ್ದು ಎನ್ನುತ್ತಾರೆ. ಆರೋಪಿಗೂ ದೂರಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚೆಕ್ಕು ಆರೋಪಿಯದಲ್ಲ ಮತ್ತು ಅದರಲ್ಲಿ ಬರೆದಿರುವ ಸಹಿ ಆರೋಪಿಯದಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವ ಕಾಲಕ್ಕೂ ನಮಗೆ ಚೆಕ್ಕು ಕೊಟಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ಕ್ಕೆ ಮತ್ತು ದೂರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ್ದನ್ನು ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆಎಂಎಫ್‌ಸಿ, ಮುಧೋಳ.

ಸಾಕ್ಷಿಯ ಸಹಿಃ